ಸಾಕ್ಷಿ ಯನ್ನು ದಿಃ 24.09.2025 ರಂದು  ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ  ಆರೋಪಿ ಪರ ವಕೀಲರಿಂದ**

1. ಆರೋಪಿ ನನಗೆ 8 ವರ್ಷದಿಂದ ಪರಿಚಯ. ಅವರು ನನಗೆ ಸಂಪತ್ ಆಚಾರಿಯವರ ಕಡೆಯಿಂದ ಪರಿಚಯ. ಅವರು ಹೆಚ್.ವಿ.ಎಸ್ ಲ್ಯಾಬ್ ನಲ್ಲಿ ಪರಿಚಯವಾಗಿರುತ್ತಾರೆ.
2. ಅವರು ನನ್ನನ್ನು ಏಪ್ರಿಲ್ 2023 ರಲ್ಲಿ ಹಣ ಕೇಳಿದ್ದರು, ದಿನಾಂಕ ನೆನಪಿಲ್ಲ.
3. ನಾನು ಏಪ್ರಿಲ್ 2023 ರಲ್ಲಿ ಹಣ ನೀಡಿದ್ದೇನೆ. ದಿನಾಂಕ ನೆನಪಿಲ್ಲ. ಸದರಿ ವಿಚಾರವನ್ನು ನನ್ನ ದೂರಿನಲ್ಲಿ ಬರೆಸಿರುತ್ತೇನೆ.
4. ನಾನು ಹಣ ನೀಡಿದ ದಿನವೇ ಆರೋಪಿ 2 ಚೆಕ್ ನೀಡಿರುತ್ತಾರೆ. ಸದರಿ ಚೆಕ್ ಕೊಟಕ್ ಮಹೀಂದ್ರ ಬ್ಯಾಂಕ್ ಮೈಸೂರು ಹಾಗೂ ಎಸ್.ಬಿ.ಐ ಕುಶಾಲನಗರ ಶಾಖೆಯ ತಲಾ 5 ಲಕ್ಷದ ಚೆಕ್ ನೀಡಿದ್ದರು. ಒಂದು ಕೊಟಕ್ ಬ್ಯಾಂಕಿನ ಚೆಕ್ ನಂ.000007 ಆಗಿದ್ದು, ಇನ್ನೊಂದು ನೆನಪಿಲ್ಲ.
5. ಚೆಕ್ ಹಾಜರುಪಡಿಸಿದಾಗ ಒಂದು ಚೆಕ್ ಹಣವಿಲ್ಲ ಎಂದು ಹಾಗೂ ಇನ್ನೊಂದು ಚೆಕ್ ಸಿಗ್ನೇಚರ್ ಡಿಫರ್ ಎಂದು ವಾಪಸ್ ಬಂದಿರುತ್ತವೆ. ಯಾವ ಬ್ಯಾಂಕಿನ ಚೆಕ್ ಡಿಫರ್ ಎಂದು ನನಗೆ ನೆನಪಿಲ್ಲ.
6. ನಾನು ಹಣವನ್ನು ನನ್ನ ಮನೆಯಲ್ಲಿ ಕೊಟ್ಟಿರುತ್ತೇನೆ. ಆ ಸಮಯದಲ್ಲಿ ನಾನು ಹಾಗೂ ಆರೋಪಿ ಇಬ್ಬರೇ ಇದ್ದೆವು. ಆರೋಪಿ ವ್ಯಾಪಾರ ಮಾಡುತ್ತೇನೆ ಎಂದು ತಿಳಿಸಿದ್ದರು. ಆರೋಪಿ ಈಗ ಎಲ್ಲಿ ವಾಸವಿದ್ದಾರೆ ಎಂದರೆ, ಅವರದು ಆಲನಹಳ್ಳಿ ಗ್ರಾಮ, ಈಗ ಕುಶಾಲನಗರದ ಪಕ್ಕ ಊರು, ನನಗೆ ನೆನಪಿಗೆ ಬರುತ್ತಿಲ್ಲ.
7. ಆರೋಪಿಯ ತಂದೆ ಹೆಸರು ನನಗೆ ನೆನಪಿಲ್ಲ. ಅವರ ಕುಟುಂಬದವರು ಸಹ ನನಗೆ ಗೊತ್ತಿಲ್ಲ.
8. ಆರೋಪಿಗೆ ನೀಡಿದ 10 ಲಕ್ಷ ಹಣವನ್ನು ಶುಂಠಿ ಬೆಳೆದ ನಗದು ಹಣವನ್ನು ಮನೆಯಲ್ಲಿ ಇತ್ತು, ಅದನ್ನು ನೀಡಿರುತ್ತೇನೆ.
9. ಶುಂಠಿ ಸುಮಾರು 150 ಚೀಲ ಆಗಿತ್ತು. 2023 ರಲ್ಲಿ ಶುಂಠಿ ಒಂದು ಚೀಲಕ್ಕೆ 400 ರಿಂದ 500 ಇತ್ತು.

10. ಶುಂಠಿಯನ್ನು ಯಾವ ವ್ಯಕ್ತಿಗೆ ಯಾವ ಮಂಡಿಗೆ ಕೊಟ್ಟಿದ್ದೆ ಎಂದು ನನಗೆ ನೆನಪಿಲ್ಲ.
11. ಶುಂಠಿ ಮಾರಿದಾಗ ಅವರು ಒಂದು ಚೀಟಿ ಕೊಡುತ್ತಾರೆ ಎಂದರೆ ಸರಿ.
12. ಯಾವ ಮುಖ ಬೆಲೆಯ ನೋಟುಗಳನ್ನು ನೀಡಿದ್ದೆ ಎಂದು ಈಗ ನೆನಪಿಲ್ಲ.
13. ಈ ಪ್ರಕರಣದ ವ್ಯವಹಾರದ ಮೊದಲು ಆರೋಪಿಗೆ ನನಗೆ ಬೇರೆ ವ್ಯವಹಾರ ಇರಲಿಲ್ಲ.
14. ನಾನು ಶುಂಠಿ, ತಂಬಾಕು ಹಾಗೂ ಜೋಳ ಬೆಳೆಯುವ ಬಗ್ಗೆ ಪಹಣಿಯಲ್ಲಿ ನಮೂದು ಇದೆಯಾ ಎಂದರೆ, ತೋಟ ಎಂದು ಇದೆ.

**(ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ